# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 694 |
| ಸದಸ್ಯರ ಹೆಸರು | ಶ್ರೀ ಮಧು.ಜಿ.ಮಾದೇಗೌಡ |
| ಉತ್ತರಿಸುವ ದಿನಾಂಕ | 12.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ 'ಸಿ' ವರ್ಗದ ದೇವಾಲಯಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಮಂಡ್ಯ ಜಿಲ್ಲೆ ಮುಜರಾಯಿ ಇಲಾಖೆಗೆ ಸೇರಿದ ಪ್ರವರ್ಗ 'ಸಿ' ವರ್ಗದ 2099 ದೇವಾಲಯಗಳಿರುತ್ತವೆ. ತಾಲ್ಲೂಕುವಾರು ವಿವರಗಳನ್ನು **ಅನುಬಂಧ**-1 ರಲ್ಲಿ ಒದಗಿಸಿದೆ. |
| ಆ) | ದೇವಾಲಯಕ್ಕೆ ಸೇರಿದ ಸ್ಥಿರಾಸ್ತಿಗಳು, ಕೊಡುಗೆ ಜಮೀನುಗಳು ಆಯಾಯ ದೇವಸ್ಥಾನಗಳ ಹೆಸರಿನಲ್ಲಿ ಖಾತೆ ಆಗಿದೆಯೇ; ಇದ್ದಲ್ಲಿ ದೇವಾಲಯಗಳಿಗೆ ಸೇರಿದ ಒಟ್ಟು ಸ್ಥಿರಾಸ್ತಿಗಳು ಎಷ್ಟು; (ವಿಸ್ತೀರ್ಣದೊಂದಿಗೆ ಮಾಹಿತಿ ನೀಡುವುದು) | ದೇವಾಲಯಕ್ಕೆ ಸೇರಿದ ಸ್ಥಿರಾಸ್ತಿಗಳು, ಕೊಡುಗೆ ಜಮೀನುಗಳು ಆಯಾಯ ದೇವಸ್ಥಾನಗಳ ಹೆಸರಿನಲ್ಲಿ ಖಾತೆಯಾಗಿರುತ್ತವೆ. ದೇವಾಲಯಗಳಿಗೆ ಸೇರಿದ ಸ್ಥಿರಾಸ್ತಿಗಳ ತಾಲ್ಲೂಕುವಾರು ವಿವರಗಳನ್ನು **ಅನುಬಂಧ**-1ರಲ್ಲಿ ಒದಗಿಸಿದೆ. |
| ಇ) | ಇಲ್ಲದಿದ್ದಲ್ಲಿ, ಯಾವ ಯಾವ ದೇವಸ್ಥಾನಗಳ ಹೆಸರಿಗೆ ಸ್ಥಿರಾಸ್ತಿ ಇನ್ನೂ ಖಾತೆ ಆಗಿರುವುದಿಲ್ಲ; ಇದುವರೆವಿಗೂ ಸ್ಥಳ/ಜಮೀನು ಖಾತೆ ಆಗದಿರುವುದಕ್ಕೆ ಕಾರಣವೇನು; ಅಂತಹ ದೇವಸ್ಥಾನಗಳ ವಿವರ ನೀಡುವುದು; | ಮುಜರಾಯಿ ಇಲಾಖೆಯ ಅಧಿಸೂಚಿತ ದೇವಾಲಯಗಳಿಗೆ ಸೇರಿದ ಆಸ್ತಿಗಳನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ. ಈವರೆಗೆ ಸುಮಾರು 2760-12 ಎಕರೆ/ಗುಂಟೆ ವಿಸ್ತೀರ್ಣದ ಸುಮಾರು 1223 ಆಸ್ತಿಗಳನ್ನು ಗುರುತಿಸಲಾಗಿದೆ. ಸದರಿ ಆಸ್ತಿಗಳ ದಾಖಲಾತಿಗಳ ಸಂಗ್ರಹ ಮತ್ತು ಪರಿಶೀಲನಾ ಕಾರ್ಯ ನಡೆಸಲಾಗುತ್ತಿದ್ದು, ಆಯಾ ದೇವಾಲಯಗಳ ಹೆಸರಿನಲ್ಲಿಯೇ ಖಾತೆ/ಪಹಣಿ ಇಂಡೀಕರಣ ಮಾಡಲು ಕ್ರಮವಹಿಸಲಾಗುತ್ತಿದೆ ಹಾಗೂ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸೂಕ್ತವಾಗಿ ನಿರ್ವಹಿಸಲು ಮತ್ತು ಆಸ್ತಿ ಸಂರಕ್ಷಣೆಗೆ ಅಗತ್ಯ ಕ್ರಮವಹಿಸಲು ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಕೆಲವು ದೇವಸ್ಥಾನಗಳಿಗೆ ಸೇರಿರುವ ಕೊಡುಗೆ ಜಮೀನುಗಳನ್ನು ಕೆಲವರು ಆಕ್ರಮವಾಗಿ ಮಾಡಿಕೊಂಡಿರುವ ಹಾಗೂ ಕೆಲವು ಪ್ರಕರಣಗಳಲ್ಲಿ ಘನ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಸಂಪೂರ್ಣ ವಿವರ ನೀಡುವುದು) | ದೇವಸ್ಥಾನಗಳಿಗೆ ಸೇರಿರುವ ಆಸ್ತಿಗಳ ದಾಖಲಾತಿಗಳ ಸಂಗ್ರಹ ಮತ್ತು ಪರಿಶೀಲನಾ ಕಾರ್ಯ ನಡೆಸಲಾಗುತ್ತಿde. ಸರ್ವೆ ಕಾರ್ಯ ಕೈಗೊಂಡು ದೇವಾಲಯದ ಆಸ್ತಿಗಳನ್ನು ಆಕ್ರಮವಾಗಿ ಮಾಡಿಕೊಂಡಿರುವುದು ಅಥವಾ ಒತ್ತುವರಿ ಮಾಡಿಕೊಂಡಿರುವುದು ಕಂಡು ಬಂದಲ್ಲಿ ತೆರವು ಮಾಡಿಸಲು ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಹಾಗೂ ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡಲಾಗಿದೆ. |

ಸಂಖ್ಯೆ: ಕಂಇ 45 ಮುಸಪ್ರ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

# ಅನುಬಂಧ-1

## ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿರು ಸಮೂಹ 'ಸಿ' ವರ್ಗದ ಅಧಿಸೂಚಿತ ದೇವಾಲಯಗಳ ವಿವರ

| ಕ್ರ. ಸಂ. | ತಾಲ್ಲೂಕು | "ಸಿ" ವರ್ಗದ ಅಧಿಸೂಚಿತ ದೇವಾಲಯಗಳ ಸಂಖ್ಯೆ | ಗುರುತಿಸಿರುವ ಆಸ್ತಿಗಳ | |
|---|---|---|---|---|
| | | | ಒಟ್ಟು ಸಂಖ್ಯೆ | ವಿಸ್ತೀರ್ಣ(ಎ/ಗು) |
| 1 | ಮಂಡ್ಯ | 287 | 176 | 361-07 |
| 2 | ಮದ್ದೂರು | 280 | 192 | 492-18 |
| 3 | ಮಳವಳ್ಳಿ | 261 | 64 | 243-28 |
| 4 | ಪಾಂಡವಪುರ | 227 | 119 | 193-08 |
| 5 | ಶ್ರೀರಂಗಪಟ್ಟಣ | 143 | 46 | 79-37 |
| 6 | ನಾಗಮಂಗಲ | 561 | 463 | 1060-38 |
| 7 | ಕೆ.ಆರ್.ಪೇಟೆ | 340 | 163 | 328-36 |
| ಒಟ್ಟು | | 2099 | 1223 | 2760-12 |

ಜಿಲ್ಲಾಧಿಕಾರಿಗಳ ಪರವಾಗಿ
ಮುಜರಾಯಿ ಜಿಲ್ಲೆ ಮಂಡ್ಯ